


ಎಂ.ಕೆ ಆಗ್ರೋಟೆಕ್ ಪ್ರೈ. ಲಿ ಕಂಪೆನಿಯು ಅಡುಗೆ ಎಣ್ಣೆ ತಯಾರಿಕಾ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು ಇತ್ತೀಚೆಗೆ ತನ್ನ ಉತ್ಪಾದನಾ ಶ್ರೇಣಿಗಳನ್ನು ವಿಸ್ತರಿಸಿದೆ, ಸನ್‌ಪ್ಯೂರ್ ಬ್ರಾಂಡಿನ ಅಡಿಯಲ್ಲಿ ಸಲ್ಫರ್ ರಹಿತ ಸಕ್ಕರೆ, ಉತ್ಕೃಷ್ಠ ಗುಣಮಟ್ಟದ ಗೋದಿಹಿಟ್ಟು ಮತ್ತು ಹುರಿಗಡಲೆಯನ್ನು ಬಿಡುಗಡೆ ಮಾಡಿದ್ದು ಇನ್ನು ಹಲವಾರು ಉತ್ಪನ್ನಗಳನ್ನು ಸದ್ಯದಲ್ಲಿಯೇ ಮಾರುಕಟ್ಟೆಗೆ ಪರಿಚಯಿಸಲಿದೆ. ಈ ಎಲ್ಲಾ ಉತ್ಪನ್ನಗಳನ್ನು ಗುಣಮಟ್ಟ, ನಿಖರಬೆಲೆ ಮತ್ತು ಆರೋಗ್ಯಕ್ಕೆ ಪೂರಕವಾಗಿ ಗ್ರಾಹಕರಿಗೆ ಪೂರೈಸುವುದೇ ನಮ್ಮ ಕಂಪೆನಿಯ ಮುಖ್ಯ ಧ್ಯೇಯವಾಗಿರುತ್ತದೆ, ಇದರ ಜತೆಗೆ ಸಾಮಾಜಿಕ ಹೊಣೆಗಾರಿಕೆಯ ಭಾಗವಾಗಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಾಗೂ ಕೊಡುಗೆಗಳನ್ನು ನೀಡುವುದರೊಂದಿಗೆ ಸದೃಢ ಸಮಾಜ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದು ಗಳಿಸು ಮತ್ತು ನೀಡು (EARN & SERVE) ತತ್ವದನ್ವಯ ಸಮಾಜಸೇವೆ ಮಾಡುತ್ತಿದೆ.

ಕಳೆದ ಸಾಲಿನಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವುದು, ಶಾಲೆಗಳಲ್ಲಿ ಗ್ರಂಥಾಲಯಗಳನ್ನು ನಿರ್ಮಿಸಿ ನಿರ್ವಹಿಸುವುದು ಮತ್ತು ರಾಷ್ಟ್ರೀಯ ಹಬ್ಬದಂತ ಆಚರಣೆಗಳಿಗೆ ನೆರವಾಗುವುದು ಅಲ್ಲದೇ ಆರೋಗ್ಯ ಕ್ಷೇತ್ರದಲ್ಲಿ ಮಂಡ್ಯ ಜಿಲ್ಲೆಯಾದ್ಯಂತ "ಸನ್‌ಪ್ಯೂರ್ ಪಡಸಾಲೆ" ಎಂಬ ಆರೋಗ್ಯ ತಪಾಸಣಾ ಶಿಬಿರವನ್ನು ನಿರಂತರವಾಗಿ ಮಂಡ್ಯ ಯೂತ್‌ಗ್ರೂಪ್ ಜತೆಗೂಡಿ ನಡೆಸಿಕೊಂಡು ಬರುತ್ತಿದ್ದು ಸಾರ್ವಜನಿಕರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದ್ದೇವೆ ಮತ್ತು ಇತ್ತೀಚೆಗೆ ಶ್ರೀರಂಗಪಟ್ಟಣದ ಸರ್ಕಾರಿ ಆಸ್ಪತ್ರೆ, ಮೈಸೂರಿನ ಆಲ್-ಅನ್ಸರ್ ಆಸ್ಪತ್ರೆಗಳಿಗೆ ತಲಾ ಎರಡು ಡಯಾಲಿಸಿಸ್ ಯಂತ್ರಗಳನ್ನು ಹಾಗೂ ನೀರು ಶುದ್ಧೀಕರಣ ಘಟಕ ನೀಡಿದ್ದು ಇದರಿಂದ ಆರ್ಥಿಕವಾಗಿ ದುರ್ಬಲರಾದ ರೋಗಿಗಳು ರಿಯಾಯಿತಿ ದರದಲ್ಲಿ ಡಯಾಲಿಸಿಸ್ ಮಾಡಿಸಿಕೊಳ್ಳಲು ಬಹು ದೊಡ್ಡ ಮಟ್ಟದಲ್ಲಿ ನೇರವಾಗಿದ್ದೇವೆ.

ಇದರ ಮುಂದುವರಿದ ಭಾಗವಾಗಿ ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಗ್ರಾಮದ ಲೇಟ್ ಸೋಮಶೇಖರ್ ಮತ್ತು ಪ್ರೇಮಾ ದಂಪತಿಗಳ ಪುತ್ರಿ ಕುಮಾರಿ ಡಾ॥ ಸೌಜನ್ಯ ಎ.ಎಸ್ ಇವರಿಗೆ ಎಂ ಡಿ ಪದವಿಗೆ ನೆರವಾಗುತ್ತಿದ್ದು ವಿವರ ಇಂತಿದೆ:

ಡಾ॥ ಸೌಜನ್ಯ ಎ.ಎಸ್ ಇವರು ಅರಕೆರೆ ಗ್ರಾಮದವರಾಗಿದ್ದು ಹತ್ತು ವರ್ಷಗಳ ಹಿಂದೆ ಇವರ ತಂದೆ ತೀರಿಕೊಂಡಿದ್ದಾರೆ. ಹಾಲಿ ತಾಯಿ ತಮ್ಮ ಮತ್ತು ತಂಗಿ ಇದ್ದು ಬಹಳ ಕಡುಬಡತನದಲ್ಲಿ ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವ ವಿದ್ಯಾಲಯದಲ್ಲಿ ಬಿ.ಎ.ಎಂ.ಎಸ್ ಪದವಿ ಪಡೆದುಕೊಂಡಿದ್ದಾರೆ. ಬ್ಯಾಂಕಿನಿಂದ ಸುಮಾರು ನಾಲ್ಕು ಲಕ್ಷ ರೂಪಾಯಿಗಳನ್ನು ವಿದ್ಯಾಬ್ಯಾಸ ಸಾಲ ಪಡೆದುಕೊಂಡಿದ್ದು ಅದನ್ನು ಮರುಪಾವತಿಸಲಾಗಿಲ್ಲ ಆದರೂ ಮುಂದೆ ಕಾಯಾ ಚಿಕಿತ್ಸೆಯಲ್ಲಿ ಎಂ.ಡಿ ವ್ಯಾಸಾಂಗ ಮಾಡುವ ಸಲುವಾಗಿ ಗದಗ ಜಿಲ್ಲೆ ಗಜೇಂದ್ರಗಡದಲ್ಲಿರುವ ಶ್ರೀ ಭಗವಾನ್ ಮಹಾವೀರ್ ಜೈನ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಸೇರಿಕೊಂಡಿದ್ದು ಹಣಕಾಸಿನ ನೆರವಿಗಾಗಿ ಪರಿತಪಿಸುತ್ತಿದ್ದ ಸಂದರ್ಭದಲ್ಲಿ ಮಾಸೂಮ್ ಟ್ರಸ್ಟ್ ಮತ್ತು ಎಂ.ಕೆ ಆಗ್ರೋಟೆಕ್ ಅಧಿಕಾರಿಗಳು ಈ ಬಗ್ಗೆ ಮಾಹಿತಿ ಕಲೆಹಾಕಿ ಕುಟುಂಬದ ಹಿನ್ನಲೆ ಮತ್ತು ವಿವರಗಳನ್ನು ಪರಿಶೀಲಿಸಿ ಪ್ರಸಕ್ತ 1 ವರ್ಷ ಅವಧಿಗೆ ಕಾಲೇಜು ಶುಲ್ಕ ಮತ್ತು ಹಾಸ್ಟೆಲ್ ವೆಚ್ಚದ ಬಾಬ್ತು 1 ಲಕ್ಷ ರೂಪಾಯಿಗಳ ಚೆಕ್ಕನ್ನು ಮಾಸೂಮ್ ಟ್ರಸ್ಟ್ ಮುಖಾಂತರ ನೀಡುತ್ತಿದ್ದು, ಆಕೆಯು ಎಂ ಡಿ ಪದವಿ ಪಡೆದು ಸಮಾಜಕ್ಕೆ ಉತ್ತಮ ವೈದ್ಯೆಯಾಗಿ ಸೇವೆ ಸಲ್ಲಿಸಬೇಕೆಂಬ ದೃಢ ನಿರ್ಧಾರ ಹಾಗೂ ಮಹತ್ವಾಕಾಂಕ್ಷೆಗೆ ನಮ್ಮ ಕಂಪೆನಿಯು ಕೈಜೋಡಿಸಿರುತ್ತದೆ.